



# ಮಸಾಯಿ ಮಾರಾ

## ಮರೆಯಲಾಗದ ಪಯಣ

**ಆಫ್ರಿಕಾದ ಮಸಾಯಿ ಮಾರಾ ವನ್ಯಜೀವಿ ಸಂರಕ್ಷಣಾ ಪ್ರದೇಶಕ್ಕೆ ಈಚೆಗೆ ಭೇಟಿ ಕೊಟ್ಟಿದ್ದ ನಟಿ ಪೂಜಾ ಗಾಂಧಿ ಅಲ್ಲಿನ ಪ್ರಕೃತಿ ಸೌಂದರ್ಯ, ವನ್ಯಜೀವಿಗಳ ಬದುಕು ಹಾಗೂ ಸ್ಥಳೀಯರ ಆತಿಥ್ಯದ ಅನುಭವವನ್ನು 'ಸುಧಾ' ಓದುಗರೊಂದಿಗೆ ಹಂಚಿಕೊಂಡಿದ್ದಾರೆ.**

ಆಫ್ರಿಕಾದ ಹೃದಯಭಾಗದಲ್ಲಿ, ಕೀನ್ಯಾ ಮತ್ತು ತಾಂಜಾನಿಯಾದ ಗಡಿಯಲ್ಲಿರುವ ವನ್ಯಜೀವಿ ಸಂರಕ್ಷಣಾ ಪ್ರದೇಶ ಮಸಾಯಿ ಮಾರಾಗೆ ಪ್ರವಾಸ ಹೊರಟಿದ್ದೆವು. ಮಸಾಯಿಯೆಂಬ ಬುಡಕಟ್ಟು ಜನಾಂಗದ ಜೀವನಾಡಿ ಮಾರಾ ನದಿ, ಮೂವತ್ತು ಸಾವಿರ ಕಿಲೋಮೀಟರ್ ವ್ಯಾಪ್ತಿಯಲ್ಲಿ ಹರಡಿರುವ ಸವನ್ನಾ ಹುಲ್ಲುಗಾವಲು, ವೈವಿಧ್ಯಮಯ ವನ್ಯಜೀವಿಗಳ ಸಮ್ಮಿಲನ. ವಿಶ್ವದೆಲ್ಲೆಡೆಯಿಂದ ಪ್ರವಾಸಿಗಳನ್ನು ಸೆಳೆಯುವ ವಿಶೇಷ ಸ್ಥಳ.

ದುಬೈನಿಂದ ನೈರೋಬಿಗೆ ತಲುಪಿದ ನಂತರ, ಎಂಟು ಗಂಟೆಗಳ ದೀರ್ಘ ರಸ್ತೆ ಪ್ರಯಾಣದ ಮೂಲಕ ಮಸಾಯಿ ಮಾರಾಗೆ ನಮ್ಮ ಪ್ರವಾಸ ಆರಂಭವಾಯಿತು. ಆಫ್ರಿಕಾದ ಬಡತನ, ನಿರುದ್ಯೋಗ, ಮಾಲಿನ್ಯ, ಅಲಕ್ಷಿತ ಮಕ್ಕಳಲ್ಲಿ ಕಾಣಿಸಿಕೊಂಡ ಅಪೌಷ್ಟಿಕತೆ, ದಾರಿಯುದ್ದಕ್ಕೂ ಕಣ್ಣಿಗೆ ರಾಚುತ್ತಿತ್ತು.

ಮಧ್ಯಾಹ್ನ ಎರಡು ಗಂಟೆಗೆ ನಾವು ಮಸಾಯಿ ಮಾರಾ ನ್ಯಾಷನಲ್ ರಿಸರ್ವ್ ತಲುಪಿದೆವು. ಸ್ವಲ್ಪ ವಿಶ್ರಾಂತಿ ಪಡೆದು, ಸಂಜೆ ಸಫಾರಿ ಜೀಪ್ ಮೂಲಕ ಉದ್ಯಾನವನದೊಳಗೆ ಕಾಲಿಟ್ಟ ಕ್ಷಣದಿಂದಲೇ, ಬಂಗಾರದಂತೆ ಹೊಳೆಯುವ ವಿಶಾಲ ಮೈದಾನಗಳು ನಮ್ಮ ಕಣ್ಣಮುಂದೆ ತೆರೆದುಕೊಂಡು ನಮ್ಮನ್ನು ರಮ್ಯಲೋಕಕ್ಕೆ ಕರೆದೊಯ್ದವು. ಕೆಲವು ಕಿಲೋಮೀಟರ್ ಸಾಗಿದಂತೆ ಗುಂಪು ಗುಂಪಾಗಿ ಓಡಾಡುತ್ತಿದ್ದ ಜೀಬ್ರಾಗಳು, ಹುಲ್ಲೆಗಳು, ಸಾರಂಗಗಳು ನಮ್ಮ ದೃಷ್ಟಿಗೆ ಬಿದ್ದವು. ದೂರದಲ್ಲಿ ವಿಶಿಷ್ಟ ಕಲಾಕೃತಿಗಳಂತಿದ್ದ ಅಕೇಷಿಯಾ ಮರಗಳು, ಹೊಸ ಪ್ರಪಂಚಕ್ಕೆ ನಮಗೆ ಆಹ್ವಾನ ನೀಡಿದಂತೆ ಕಂಡವು. ಅಲ್ಲೇ ಒಂದಷ್ಟು ದೂರ ಸಾಗಿದಂತೆ, ಕರಗುತ್ತಿದ್ದ ಸೂರ್ಯನ ಬೆಳಕಿನಲ್ಲಿ ಆಟವಾಡುತ್ತಿದ್ದ